SE – 011

# I Semester B.C.A. Examination, January/February 2026
## (SEP 2024) (Repeaters)
### ಕನ್ನಡ ಭಾಷಾ ಪತ್ರ
### ಗಣಕ ಕನ್ನಡ – 1

Time : 3 Hours

Max. Marks : 80

I. ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**100** ಪದಗಳನ್ನು ಮೀರದಂತೆ) : **(5×5=25)**

1) ಕನ್ನಡ ಭಾಷೆಯ ವಿಶಾಲತೆಯನ್ನು ಬೇಂದ್ರೆ ಅವರು ತಿಳಿಸಿರುವ ಬಗೆಯನ್ನು ವಿವರಿಸಿ.
2) 'ಐಟಿ' ಉದ್ದಿಮೆ ಜನರನ್ನು ಹೇಗೆ ಸೆಳೆಯುತ್ತಿದೆ ಚರ್ಚಿಸಿ.
3) 'ಎಷ್ಟೊಂದು ಮುಗಿಲುಗಳು' ಕವಿತೆಯ ಸ್ವಾರಸ್ಯವೇನು ?
4) ಪಾಸ್ಕಲ್ ಮಾಡಿದ ಆವಿಷ್ಕಾರ ಮತ್ತು ಆತನ ಆಸಕ್ತಿಗಳನ್ನು ವಿವರಿಸಿ.
5) ಮುಸ್ತಫನ ವ್ಯಕ್ತಿತ್ವ ಪರಿಚಯಿಸಿ.
6) ಹೊಸ ತಂತ್ರಜ್ಞಾನಗಳು ಸೃಷ್ಟಿಸುತ್ತಿರುವ ಅಪಾರ ಅವಕಾಶಗಳನ್ನು ಬರೆಯಿರಿ.
7) 'ಇ-ಪುಸ್ತಕ'ವನ್ನು ಕುರಿತು ಬರೆಯಿರಿ.

OM SAI COLLEGE
No..................
Dt..................
LIBRARY

II. ಮೂರು ಪ್ರಶ್ನೆಗಳಿಗೆ ಉತ್ತರಿಸಿ (**200** ಪದಗಳು ಮೀರದಂತೆ) : **(3×10=30)**

1) 'ಅನುಭವಾಮೃತದಲ್ಲಿ ಪೇಳುವೆ' ಪದ್ಯಭಾಗದ ನೀತಿ ತತ್ವಗಳನ್ನು ವಿಶ್ಲೇಷಿಸಿ.
2) ಮಗಳಂತಿದ್ದ ಮುಬೀನಾ ಮುಕುಂದಣ್ಣನ ಹೆಂಡತಿಯಾದದ್ದೇಗೆ ? ವಿವರಿಸಿ.
3) ನಾಟಕದಲ್ಲಿ ರಾಧೆಗಾಗಿ ಪರಿತಪಿಸುವ ಕೃಷ್ಣನ ಚಿತ್ರಣವನ್ನು ಹೇಗೆ ಕಟ್ಟಿಕೊಡಲಾಗಿದೆ ? ವಿವರಿಸಿ.
4) ಮಾರುಕಟ್ಟೆಯಲ್ಲಿ ಲಭ್ಯವಿರುವ ಕನ್ನಡ ತಂತ್ರಾಂಶಗಳನ್ನು ವಿಶ್ಲೇಷಿಸಿ.

III. ಕೆಳಗಿನ ಗದ್ಯಭಾಗವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ. ಸೂಕ್ತ ಶೀರ್ಷಿಕೆ ನೀಡಿ. **(1×5=5)**

ವಿಶ್ವದ ವೈವಿಧ್ಯ (ಭೌತ ವಿಜ್ಞಾನ ಮತ್ತು ಖಗೋಳ ವಿಜ್ಞಾನ ಕುರಿತ ಲೇಖನಗಳು) ಕೃತಿಯಲ್ಲಿ ಮುಖ್ಯವಾಗಿ ಭೌತವಿಜ್ಞಾನದ ಹಲವು ಮುಖ್ಯ ಮೂಲಭೂತ ಪ್ರಯೋಗಗಳನ್ನು ಚರ್ಚಿಸಿದ್ದು ಪಾಲಹಳ್ಳಿ ಆರ್. ವಿಶ್ವನಾಥ್ ಅವರು ಇಂದು ಅವು ಹೇಗೆ ಆಧುನಿಕ ಆವಿಷ್ಕಾರಗಳಿಗೆ ಸಹಾಯವಾಗುತ್ತಿವೆ ಎಂಬುದನ್ನು ತೋರಿಸಿದ್ದಾರೆ. 1990 ರ ದಶಕದಲ್ಲಿ ವಿಶ್ವದ ವೇಗೋತ್ಕರ್ಷದ ಆವಿಷ್ಕಾರದ ನಂತರ ಐನ್‌ಸ್ಟೈನ್‌ರ ನಿಯತಾಂಕವನ್ನು

P.T.O.

ಅಗೋಚರ ಚೈತನ್ಯದ ಸಂಕೇತವೆಂದು ಕೆಲವು ವಿಜ್ಞಾನಿಗಳು ನಂಬಿದ್ದರು. ಆದರೆ ಭೌತ ವಿಜ್ಞಾನದಲ್ಲಿ ನಿರ್ವಾತಕ್ಕೆ ಚೈತನ್ಯ ಆವಾಹನೆ ಮಾಡುವ ಶಕ್ತಿಯಿದೆ ಎನ್ನಲಾಗುತ್ತದೆ. ಶೂನ್ಯದಲ್ಲೂ ಚಲನೆ ಇರುವುದನ್ನು ಇಲ್ಲಿನ ಲೇಖನವು ವೈಜ್ಞಾನಿಕ ನೆಲೆಯನ್ನು ಕಟ್ಟಿಕೊಡುವುದರೊಂದಿಗೆ ಅತಿ ಸೂಕ್ಷ್ಮ ಜಗತ್ತಿನ ವಿವರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಪ್ರಯತ್ನಿಸುತ್ತದೆ. ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಅರ್ಥವಾಗುವ ಹಾಗೆ ಬರೆಯಬಲ್ಲ ಸಾಧ್ಯತೆಗಳನ್ನು ಹುಡುಕಾಡುವ ರುಚಿ ಹತ್ತಿಸುವುದು ಈ ಪಠ್ಯದ ಉದ್ದೇಶವಾಗಿದೆ.

IV. ಸಂಕ್ಷೇಪಿಸಿದ ಬರಹ ಆಧರಿಸಿ **ಎರಡು** ಪ್ರಶ್ನೆಗಳನ್ನು ರೂಪಿಸಿ : **(1×2=2)**

V. ಕೆಳಗಿನವುಗಳಲ್ಲಿ **ಎರಡು** ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ : **(2×2=4)**

1) ಕರತಲಾಮಲಕ

2) ಡಿಜಿಟಲೀಕರಣ

3) ಅವಗಡ

4) ಜೀವನಾಡಿ.

VI. ವ್ಯಾಸಂಗ ಪತ್ರ ಕೋರಿ ಪ್ರಾಂಶುಪಾಲರಿಗೊಂದು ಪತ್ರ ಬರೆಯಿರಿ. **(1×5=5)**

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ : **(4×1=4)**

1) ಕಾಯಕ

2) ನಿರ್ವಾತ

3) ನೈದಿಲೆ

4) ಕಾರಕೂನ

5) ಚಹರೆ

6) ಉಡಿ.

OM SAI COLLEGE
No.....................
Dt.....................
LIBRARY

VIII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ (**ಎಲ್ಲಾ ಐದು** ಪ್ರಶ್ನೆಗಳಿಗೆ ಉತ್ತರಿಸಿ) : **(5×1=5)**

1) ಬೇಬಿಯ ಮೊದಲ ಹೆಸರೇನು ?

ಅ) ಪಸೀನಾ ಆ) ಮುಬೀನಾ

ಇ) ಸುಮತಿ ಈ) ಶಾಂತಿ

2) ಕನ್ನಡದಲ್ಲಿ 14 ಸಾಲಿನ ಪದ್ಯಜಾತಿಗೆ ಏನೆಂದು ಕರೆಯುತ್ತಾರೆ ?

ಅ) ಸಾಂಗತ್ಯ
ಆ) ಚೌಪದಿ
ಇ) ವಚನಗಳು
ಈ) ಅಷ್ಟಷಟ್ಪದಿ

3) 'ಗಂಡು ಹುಡುಗ್ರು ಪತ್ರ ಬರೆದ್ರೆ ಸೇರೋದಿಲ್ಲ ನನಗೆ' ಎಂದವರ್ಯಾರು ?

ಅ) ಸುಮತಿ
ಆ) ಶಾಂತಿ
ಇ) ಮುಬೀನಾ
ಈ) ಫಾತೀಮಾ

4) ಮಹಾಲಿಂಗ ರಂಗನ ನಿಜವಾದ ಹೆಸರು

ಅ) ರಂಗನಾಥ
ಆ) ಭದ್ರಿನಾಥ
ಇ) ಕಾಶಿನಾಥ
ಈ) ಸೋಮನಾಥ

5) 'ಶೂನ್ಯತೆಯ ಬೆನ್ನು ಹತ್ತಿ' ಲೇಖನದ ಲೇಖಕರು

ಅ) ನಾಗೇಶ್ ಹೆಗಡೆ
ಆ) ಬಿ.ಜಿ.ಎಲ್. ಸ್ವಾಮಿ
ಇ) ಶಿವರಾಮ ಕಾರಂತ
ಈ) ಪಾಲಹಳ್ಳಿ ಆರ್. ವಿಶ್ವನಾಥ್

OM SAI COLLEGE
No.............
Dt.............
LIBRARY